**ಕರ್ನಾಟಕ ಸರ್ಕಾರ**

ಆಯುಕ್ತರ ಕಛೇರಿ,
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ,
ಕೆ.ಆರ್.ವೃತ್ತ, ಬೆಂಗಳೂರು-560 001.
ದೂರವಾಣಿ: 91-080-22212408.
ಫ್ಯಾಕ್ಸ್ : 91-080-22277528.

ಸಂಖ್ಯೆ: ತಾಂ.ಪ.ಭೂ.ಘಟಕ.ಸುತ್ತೋಲೆ.10/2009-10 ದಿನಾಂಕ: 18-8-2009.

## ಸುತ್ತೋಲೆ

ವಿಷಯ: ಪರವಾನಗಿ ಭೂಮಾಪಕರು, ಅರ್ಜಿದಾರರು / ಆರ್.ಟಿ.ಸಿ.ದಾರರಿಗೆ ನೋಟೀಸು ನೀಡುವ ಸಮಯದಲ್ಲಿನ ಸಮಸ್ಯೆಗಳ ಕುರಿತು ಸ್ಪಷ್ಟೀಕರಣ.

ಉಲ್ಲೇಖ: ಈ ಕಛೇರಿಯ ಸುತ್ತೋಲೆ ಸಂ.ತಾಂ.ಪ.ಭೂ.ಘಟಕ. 65/2008-09 ದಿ:24-11-08 ಮತ್ತು 27-11-08.

***

ಮ್ಯುಟೇಷನ್ ಪೂರ್ವ ನಕ್ಷೆಗಳ ಸಿದ್ಧಪಡಿಸುವ ಸಂಬಂಧ ನೋಟೀಸ್ ಜಾರಿ ಮಾಡುವ ಬಗ್ಗೆ ಹಲವು ಪರವಾನಗಿ ಭೂಮಾಪಕರುಗಳು ಸ್ಪಷ್ಟೀಕರಣ ಕೋರಿದ್ದು, ನೋಟೀಸ್ ಜಾರಿ ಮಾಡುವ ವಿಚಾರಕ್ಕೆ ಸಂಬಂಧಿಸಿದಂತೆ, ಈಗಾಗಲೇ ಈ ಕಛೇರಿಯಿಂದ ಉಲ್ಲೇಖದಲ್ಲಿ ನಮೂದಿಸಿದಂತೆ ಸೂಕ್ತ ನಿರ್ದೇಶನ ನೀಡಲಾಗಿದೆ. ಇದಕ್ಕೆ ಮುಂದುವರಿದಂತೆ ಈ ಕೆಳಗಿನ ಸೂಚನೆಗಳನ್ನು ನೀಡಲಾಗಿದ್ದು, ಇವುಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿದೆ.

1. <u>ಎಲ್ಲಾ ಆರ್.ಟಿ.ಸಿ.ದಾರರ ವಿಳಾಸವನ್ನು ಪಡೆಯುವ ವಿಧಾನ:-</u>

ಇನ್ನು ಮುಂದೆ ಅರ್ಜಿ ಸ್ವೀಕರಿಸುವ ಸಂದರ್ಭದಲ್ಲಿಯೇ ಆರ್.ಟಿ.ಸಿ.ಯ ಕಾಲಂ 9 ರ ಹಕ್ಕುದಾರರ ವಿಳಾಸಗಳನ್ನು ಸಾಧ್ಯವಾದಷ್ಟು ಒದಗಿಸುವಂತೆ ಅರ್ಜಿ ಸ್ವೀಕರಿಸುವ ಸಿಬ್ಬಂದಿಯು ಎಲ್ಲಾ ಪ್ರಯತ್ನ ನಡೆಸುವುದು.

2. <u>ಗ್ರಾಮದ ಚಾವಡಿಗಳ ಮೂಲಕ ನೋಟೀಸ್ ಜಾರಿ ಮಾಡುವ ವಿಧಾನ:-</u>

ಇದರೊಂದಿಗೆ ಇನ್ನು ಮುಂದೆ ಕಡ್ಡಾಯವಾಗಿ ಗ್ರಾಮದ ಚಾವಡಿಯಲ್ಲಿ ನೋಟೀಸ್ ಅಂಟಿಸುವುದು. ಗ್ರಾಮದ ಚಾವಡಿಯಲ್ಲಿ ನೋಟೀಸ್ ಅಂಟಿಸಿದ ಬಗ್ಗೆ ಮಹಜರ್ ಮಾಡುವುದು. ಇನ್ನು ಮುಂದೆ ಆರ್.ಟಿ.ಸಿ.ದಾರರು ಗ್ರಾಮದಲ್ಲಿ ವಾಸಿಸುತ್ತಿರಲಿ ಅಥವಾ ವಾಸಿಸದೇ ಇರಲಿ ಮ್ಯುಟೇಷನ್ ಪೂರ್ವ ನಕ್ಷೆಗಳ ಅಳತೆ ಬಗ್ಗೆ ನೋಟೀಸ್‌ಗಳನ್ನು ಕಡ್ಡಾಯವಾಗಿ ಸಂಬಂಧಿಸಿದ ಗ್ರಾಮದ ಚಾವಡಿಗಳಲ್ಲಿ ಪ್ರಚುರಪಡಿಸುವುದು ಹಾಗೂ ಈ ಬಗ್ಗೆ ಮಹಜರ್‌ನಲ್ಲಿ ತಪ್ಪದೇ ನಮೂದಿಸುವುದು.

3. <u>ಆರ್.ಟಿ.ಸಿ.ದಾರರು ಗ್ರಾಮದಲ್ಲಿಯೇ ವಾಸಿಸುತ್ತಿದ್ದಲ್ಲಿ ಅನುಸರಿಸಬೇಕಾದ ವಿಧಾನ :</u>

ಎಲ್ಲಾ ಆರ್.ಟಿ.ಸಿ.ದಾರರ ವಿಳಾಸವನ್ನು ಅರ್ಜಿದಾರರು ಒದಗಿಸದೇ ಇದ್ದಲ್ಲಿ, ಅಂತಹವರು ಅರ್ಜಿಗೆ ಸಂಬಂಧಿಸಿದ ಸ.ನಂ.ನ ಗ್ರಾಮದಲ್ಲಿಯೇ ವಾಸಿಸುತ್ತಿರುವ ಬಗ್ಗೆ ಗ್ರಾಮದಲ್ಲಿ ಮಾಹಿತಿ ಪಡೆದು ಗ್ರಾಮದಲ್ಲಿ ವಾಸಿಸುತ್ತಿದ್ದರೆ ತಪ್ಪದೇ ನೋಟೀಸ್ ಜಾರಿ ಮಾಡುವುದು ಮತ್ತು ಸ್ವೀಕೃತಿ ಪಡೆಯುವುದು. ಗ್ರಾಮದಲ್ಲಿಯೇ ವಾಸವಿದ್ದು ನೋಟೀಸ್ ಜಾರಿ ಮಾಡಲು ತೆರಳಿದಾಗ ನೋಟೀಸ್ ಸ್ವೀಕರಿಸುವುದನ್ನು ತಿರಸ್ಕರಿಸಿದರೆ, ಆ ಬಗ್ಗೆ ಮಹಜರ್ ಮಾಡಿ ಸಲ್ಲಿಸುವುದು. ಕೆಲವು ಸಂದರ್ಭಗಳಲ್ಲಿ ಆರ್.ಟಿ.ಸಿ.ದಾರರ ಪರವಾಗಿ ಅವರವರ ರುಜು ಮನೆಯಲ್ಲಿ ವಾಸಿಸುತ್ತಿರುವ ಸಂಬಂಧಿಕರು ಸ್ವೀಕರಿಸಿದರೆ, ಪರವಾಗಿ ಸ್ವೀಕರಿಸಿದ ಆರ್.ಟಿ.ಸಿ.ದಾರರ ಸಂಬಂಧ ಮತ್ತು ಹೆಸರನ್ನು ನೋಟೀಸ್ ಮೇಲೆ ಕಡ್ಡಾಯವಾಗಿ ಪಡೆಯುವುದು. ಅಳತೆ ಸಮಯದಲ್ಲಿ ಈ ಬಗ್ಗೆ ಮಹಜರ್‌ನಲ್ಲಿ ಹಾಜರಾಗಿರುವ / ಗೈರು ಹಾಜರಾಗಿರುವ ಹಾಗೂ ನೋಟೀಸ್ ಪಡೆದಿದ್ದ ವ್ಯಕ್ತಿಗಳ ವಿವರಗಳನ್ನು ವಿವರವಾಗಿ ದಾಖಲು ಮಾಡುವುದು.

4. <u>ಆರ್.ಟಿ.ಸಿ.ದಾರರು ಗ್ರಾಮದಲ್ಲಿ ವಾಸಿಸುತ್ತಿದ್ದು ಮನೆಗೆ ಬೀಗ ಹಾಕಿದ ಸಂದರ್ಭದಲ್ಲಿ ಅನುಸರಿಸಬೇಕಾದ ವಿಧಾನ:-</u>

ನೋಟೀಸ್ ಜಾರಿ ಮಾಡಲು ತೆರಳಿದಾಗ ಮನೆಯಲ್ಲಿ ಯಾರು ಇಲ್ಲದೇ ಬೀಗ ಹಾಕಿದ್ದಲ್ಲಿ ಬಾಗಿಲಿನ ಮೇಲೆ ನೋಟೀಸ್ ಅಂಟಿಸುವುದು ಹಾಗೂ ಈ ಬಗ್ಗೆ ಮಹಜರ್ ಮಾಡುವುದು. ಗ್ರಾಮದಲ್ಲಿ ನೋಟೀಸ್ ನೀಡುವ ಸಮಯದಲ್ಲಿ ನೋಟೀಸ್ ನಿರಾಕರಿಸಿರುವ, ಮನೆಯ ಬೀಗ ಹಾಕಿರುವ ಸಂದರ್ಭಗಳಲ್ಲಿ ಗ್ರಾಮ ಲೆಕ್ಕಿಗರು/ ಗ್ರಾಮ ಸಹಾಯಕರ ಸಹಾಯವನ್ನು

5. **ಆರ್.ಟಿ.ಸಿ.ದಾರರು ಗ್ರಾಮದಲ್ಲಿ ವಾಸಿಸದೇ ಬೇರೆ ಊರಿನಲ್ಲಿ ವಾಸಿಸುತ್ತಿದಲ್ಲಿ ಅನುಸರಿಸಬೇಕಾದ ವಿಧಾನ:-**

ಎ) ಆರ್.ಟಿ.ಸಿ.ದಾರರು ಬೇರೆ ಸ್ಥಳದಲ್ಲಿ ವಾಸವಿರುವ ಬಗ್ಗೆ ಅರ್ಜಿಯಲ್ಲಿ ವಿಳಾಸ ಒದಗಿಸಿದಲ್ಲಿ ಸರ್ಟಿಫಿಕೇಟ್ ಆಫ್ ಪೋಸ್ಟಿಂಗ್ ಮೂಲಕ 7 ದಿನಗಳ ಮೊದಲೇ ನೋಟೀಸ್ ಜಾರಿ ಮಾಡುವುದು. ಹಾಗೂ ಈ ಬಗ್ಗೆ ಅಗತ್ಯ ಮಾಹಿತಿಯನ್ನು ದಾಖಲೆಯೊಂದಿಗೆ ಕಛೇರಿಗೆ ಇತ ನಕ್ಷೆಯೊಂದಿಗೆ ಸಲ್ಲಿಸುವುದು. ಅರ್ಜಿದಾರರು ತಾವೇ ಸ್ವತ: ಆಸಕ್ತಿಯಿಂದ ನೋಂದಣಿ ಅಂಚೆಯ ಮೂಲಕ ಬೇರೆ ಸ್ಥಳದಲ್ಲಿರುವ ಆರ್.ಟಿ.ಸಿ.ದಾರರಿಗೆ ನೋಟೀಸ್ ಜಾರಿ ಮಾಡಲು ವಿಳಾಸ ಮತ್ತು ಅಂಚೆ ಲಕೋಟೆಗಳನ್ನು ಒದಗಿಸಿದಲ್ಲಿ ಅವುಗಳ ಮೂಲಕವೂ ಕಳುಹಿಸಬಹುದು. ಆದರೆ ಎಲ್ಲಾ ಅರ್ಜಿದಾರರಿಗೂ ನೋಂದಣಿ ಅಂಚೆ ಬಗ್ಗೆ ಒತ್ತಾಯಿಸಬಾರದು.

ಬಿ) ಅರ್ಜಿದಾರರು ಎಲ್ಲಿ ಆರ್.ಟಿ.ಸಿ.ದಾರರ ವಿಳಾಸ ಒದಗಿಸಲು ಅಸಾಧ್ಯವಾದಲ್ಲಿ ಹಾಗೂ ಪರವಾನಗಿ ಭೂಮಾಪಕರು ಸಹ ಆರ್.ಟಿ.ಸಿ.ದಾರರು ಬೇರೆ ಊರಿನಲ್ಲಿ ವಾಸವಾಗಿರುವುದರಿಂದ ವಿಳಾಸ ಪತ್ತೆ ಹಚ್ಚುವಲ್ಲಿ ವಿಫಲರಾದಲ್ಲಿ ಮೇಲೆ ವಿವರಿಸಿರುವಂತೆ ಗ್ರಾಮದ ಚಾವಡಿಯಲ್ಲಿ ನೋಟೀಸ್ ಪ್ರಚುರಪಡಿಸಿ ಗ್ರಾಮ ಸಹಾಯಕರು/ಗ್ರಾಮ ಲೆಕ್ಕಿಗ ಸಹಿಯೊಂದಿಗೆ ಈ ಬಗ್ಗೆ ಮಹಜರ್ ಮಾಡಿದ ಕ್ರಮವನ್ನೆ ಎಲ್ಲಾ ಆರ್.ಟಿ.ಸಿ.ದಾರರಿಗೆ ನೋಟೀಸ್ ಜಾರಿ ಮಾಡಲಾಗಿದೆ ಎಂದು ಪರಿಗಣಿಸುವುದು.

18/8/07

ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ, ಮತ್ತು
ಭೂದಾಖಲೆಗಳು, ಬೆಂಗಳೂರು

18.8.07

ಪ್ರತಿಯನ್ನು:-

1) ಎಲ್ಲಾ ವಿಭಾಗದ ಪ್ರಾದೇಶಿಕ ಆಯುಕ್ತರುಗಳಿಗೆ ಮಾಹಿತಿಗಾಗಿ.
2) ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3) ಎಲ್ಲಾ ಉಪವಿಭಾಗಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
4) ಎಲ್ಲಾ ಭೂದಾಖಲೆಗಳ ಉಪ ನಿರ್ದೇಶಕರು, ಜಿಲ್ಲಾಧಿಕಾರಿಗಳ ಕಛೇರಿ ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
5) ಎಲ್ಲಾ ತಹಶೀಲ್ದಾರ್‌ಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
6) ಈ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
7) ಕೇಂದ್ರ ಕಛೇರಿಯ ಎಲ್ಲಾ ಶಾಖೆಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
8) ಅಧ್ಯಕ್ಷರು, ಕರ್ನಾಟಕ ರಾಜ್ಯ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಕಾರ್ಯನಿರ್ವಾಹಕ ಸಂಘ, ಬೆಂಗಳೂರು ಇವರಿಗೆ ಮಾಹಿತಿಗಾಗಿ
9) ಅಧ್ಯಕ್ಷರು, ಕರ್ನಾಟಕ ರಾಜ್ಯದ ಪರವಾನಗಿ ಭೂಮಾಪಕರ ಸಂಘ, ಮಹಾವೀರ ಕಾಂಪ್ಲೆಕ್ಸ್, ಕೆ.ಜಿ. ರೋಡ್, ಬೆಂಗಳೂರು ಇವರಿಗೆ ಮಾಹಿತಿಗಾಗಿ.